ಮಗನಾದ ಮರ್ಚಂಟ್ ಸುಲೈಮಾನ್ ಅಪ್ಪನ ನಂತರ ಗುಲಾಮರ ವ್ಯಾಪಾರಕ್ಕೆ ತೊಡಗುತ್ತಾನೆ. ಇವನ ಹೆಂಡತಿ ಫಾತಿಮಾ ಒಬ್ಬ ಗುಲಾಮನೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಾಳೆ ಎನ್ನುವ, ಇವನ ತಂಗಿಯೇ ತರುವ ಚಾಡಿ ಮಾತು ಮತ್ತು ಅವಳದೇ ಕುತಂತ್ರದಿಂದ ನಡೆಯುವ ಆಕೆಯ ಕೊಲೆ ಶಾಶ್ವತ ಗುಟ್ಟಾಗಿಯೇ ಉಳಿಯುತ್ತದೆ. ಈ ತಂಗಿಯನ್ನು ಮನಸಾ ದ್ವೇಷಿಸುವ, ಸುಲೈಮಾನನ ಮನದನ್ನೆಯಾದ ಗುಲಾಮಿ ಹೆಣ್ಣು ಝುರೀಫಾ ಈ ಕಾದಂಬರಿಯ ಉದ್ದಗಲಕ್ಕೆ ಮಾತ್ರವಲ್ಲ ಆಳಕ್ಕೂ ಎತ್ತರಕ್ಕೂ ವ್ಯಾಪಿಸಿಕೊಂಡಂತಿರುವ ಗಟ್ಟಿಯಾದ ಒಂದು ಕೇಂದ್ರ ಪಾತ್ರ. ಇವಳನ್ನು ಕೊಳ್ಳಲು ಸುಲೈಮಾನ್ ತೆತ್ತ ಬೆಲೆ ಯಾರೂ ಊಹಿಸಲಾಗದಷ್ಟು ಕಡಿಮೆ! ಈಕೆಯನ್ನು ಹೆತ್ತ ಅಮ್ಮನದೇ ಒಂದು ಕತೆ. ಸುಲೈಮಾನನ 'ಮಹಾಸಿಟ್ಟಿ'ನ ಪ್ರತಿಫಲವಾಗಿ ಕಟ್ಟಿಕೊಳ್ಳಲೇ ಬೇಕಾಗಿ ಬಂದ, ಇವಳಿಗೆ ಅಕಾಲಿಕ ಗಂಡನಾಗಿ ಒದಗುವ ತನಗಿಂತ ಹದಿನೈದು ವರ್ಷ ಕಿರಿಯ ಹಬೀಬ್ ಮತ್ತು ಅವನಿಂದ ಹುಟ್ಟಿದ ಮಗ ಸಂಜಾರ್ ಇಬ್ಬರ ಕ್ರಾಂತಿಕಾರಕ ನಿಲುವಿನದ್ದೇ ಒಂದು ಕತೆ. ಈಕೆಯೇ ತಾಯಂತೆ ಸಾಕಿ ಸಲಹಿದ, ತನ್ನ ಪ್ರಿಯಕರ, ಯಜಮಾನ ಸುಲೈಮಾನ್ ಮತ್ತು ಫಾತಿಮಾಳ ಮಗ ಅಬ್ದುಲ್ಲಾ ಈ ಕತೆಯ ಇನ್ನೊಂದು ಕೇಂದ್ರದಂಥ ಗಟ್ಟಿ ಪಾತ್ರ. ಇವನಿಗೆ ತನ್ನ ತಾಯಿ ಹೇಗೆ ಮತ್ತು ಏಕೆ ಸತ್ತಳೆಂಬ ರಹಸ್ಯ ಕೊನೆಗೂ ತಿಳಿಯುವುದೇ ಇಲ್ಲ. ಹಾಗೆಯೇ ವರ್ಗಸಂಘರ್ಷ, ವರ್ಣಸಂಕರ ಮತ್ತು ಶೋಷಣೆಯ ಎಳೆಯನ್ನು ಈ ಕಾದಂಬರಿಯಲ್ಲಿ ನೋಡುವುದೇ ಆದಲ್ಲಿ ಲೋಕದ ಕಣ್ಣಿಗೆ ಸುಲೈಮಾನನ ಮಗನಾಗಿ, ಅವನ ಆಸ್ತಿಪಾಸ್ತಿಯ ವಾರಸುದಾರನಾಗಿ ಬೆಳೆಯುವ ಅಬ್ದುಲ್ಲಾ ಒಂದು ರೀತಿ 'ವಂಶವೃಕ್ಷ'ದ ಶ್ರೀನಿವಾಸ ಶ್ರೋತ್ರಿ. ಅಥವಾ 'ಕುಸುಮಬಾಲೆ'ಯ ಯಾಡ, 'ಅವಧೇಶ್ವರಿ'ಯ ತ್ರಸದಸ್ಯು.

ಈ ಅಬ್ದುಲ್ಲಾ ಮದುವೆಯಾಗುವುದು ಮೇಲೆ ಹೇಳಿದ ಮೂವರು ಹೆಣ್ಣುಮಕ್ಕಳ ಸಂಸಾರದ ಹಿರಿಯ ಹೆಣ್ಣುಮಗಳನ್ನು, ಮಾಯಾಳನ್ನು. ಮಾಯಾ ಈ ಕಾದಂಬರಿಯ ಮತ್ತೊಂದು ಗಟ್ಟಿಯಾದ ಕೇಂದ್ರ ಸ್ತ್ರೀಪಾತ್ರ. ಮಾಯಾ, ಆಸ್ಮಾ ಮತ್ತು ಖಾವ್ಲಾ ಈ ಮೂವರು ಅಝಾನ್ ಮತ್ತು ಸಲೀಮಾ ದಂಪತಿಯ ಮೂವರು ಪುತ್ರಿಯರು. ಈ ಗಂಡಹೆಂಡಿರು ಅದಾಗಲೇ ಇಬ್ಬರು ಗಂಡು ಮಕ್ಕಳನ್ನು ಕಳೆದುಕೊಂಡಿದ್ದಾರೆ. ಅವರಲ್ಲಿ ಒಂದು ಹಸುಗೂಸಾಗಿರುವಾಗಲೇ ಸತ್ತಿದ್ದರೆ ಇನ್ನೊಬ್ಬ ಹುಡುಗ ಹಮದ್, ಹನ್ನೊಂದು ಹನ್ನೆರಡರದ ಹರಯದಲ್ಲಿ ಸಕಾಲದಲ್ಲಿ ಚಿಕಿತ್ಸೆ ಸಿಗದೆ ದಾರುಣ ಸಾವಿಗೆ ಬಲಿಯಾಗುತ್ತಾನೆ. ಈ ನೋವು ಅಝಾನ್‌ನನ್ನು ಸದಾಕಾಲ ಕಾಡುತ್ತಲೇ ಇರುತ್ತದೆಯಾದರೂ ಅವನದನ್ನು ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ. ಈ ಅಝಾನ್ ಅಕಾಲದಲ್ಲಿ ಕ್ವಮಾರ್ ಅಥವಾ ನಝಿಯಾ ಎಂಬ ಮೋಹಕ ಹೆಣ್ಣಿನ ಮೋಹಜಾಲದಲ್ಲಿ ಬಿದ್ದು ಕೆಲಕಾಲ ಪರವಶನಾಗುತ್ತಾನೆ. ಇವನನ್ನು ಆಕೆಯಿಂದ ಬಿಡಿಸಿಕೊಳ್ಳಲು ಸಲೀಮಾ ಮಾಟ ಮಾಡುವ ತಾಂತ್ರಿಕನ ಸಹಾಯ ಪಡೆಯುತ್ತಾಳೆ. ಇದರಿಂದ ಬಹುಶಃ ನಜಿಯಾ ಮತ್ತು ಅಝಾನ್ ಇಬ್ಬರ ಬದುಕೂ ನಾಶವಾಗುತ್ತದೆ ಎನ್ನುವುದು ಕೇವಲ ಒಂದು ಸಂಸಾರದ, ಒಂದು ಮದುವೆ ಮತ್ತು ವಿವಾಹೇತರ ಸಂಬಂಧದ ರೂಪಕವಷ್ಟೇ ಆಗಿ ಉಳಿಯದೆ ಇಡೀ ಕಾದಂಬರಿಯ ಹತ್ತು ಹಲವು ದಾಂಪತ್ಯಗಳ ಆಳದ ನೋವು, ವೈಫಲ್ಯ ಮತ್ತು ದುರಂತದ ರೂಪಕವೂ ಆಗಿರುವುದು ಗಮನಾರ್ಹ. ಕಥನದ ಕಾವ್ಯಾತ್ಮಕ ಮತ್ತು ನಿಗೂಢ ಚಲನೆಯಲ್ಲೇ ಈ ಪ್ರಸಂಗ ಇನ್ನಿಲ್ಲದ ಗುರುತ್ವವೊಂದನ್ನು ಪಡೆದುಕೊಂಡಿರುವುದು ಕಾದಂಬರಿಯ ಹಲವು ಹತ್ತು ಯಶಸ್ವೀ ತಂತ್ರಗಳಲ್ಲಿ ಒಂದಾಗಿದೆ.

ಅಬ್ದುಲ್ಲಾ ಮತ್ತು ಮಾಯಾ ಇಬ್ಬರ ದಾಂಪತ್ಯ ಒಂದು ವಿಚಿತ್ರ ಬಗೆಯದು. ಅಬ್ದುಲ್ಲಾ ಏನೋ ಮಾಯಾಳನ್ನು ಇನ್ನಿಲ್ಲದಂತೆ ಪ್ರೀತಿಸುತ್ತಾನೆ ಎಂದೇ ಇಟ್ಟುಕೊಂಡರೂ ಮಾಯಾಗೆ ಇದ್ದಿದ್ದು 'ಅವನ' ಕನಸು. ಆ 'ಅವನು' ಯಾರೆಂದು ಅವಳಿಗೇ ಸ್ಪಷ್ಟವಿಲ್ಲದಿದ್ದರೂ ಅದು ಅಬ್ದುಲ್ಲಾ ಅಲ್ಲ